MARCH 29, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಜಲ್ ಜೀವನ್ ಮಿಷನ್: ಪ್ರತಿ ಲೀಟರ್‌ಗೆ 1 ಪೈಸೆಯಂತೆ, ಪ್ರತಿ ಮನೆಗೆ ಶುದ್ಧ ಕುಡಿಯುವ ನೀರು ಪೂರೈಕೆ – ಅಜಯ್ ಸಿಂಹ.**
- **ಮಹಾತ್ಮ ಗಾಂಧಿ ನರೇಗಾ ಯೋಜನೆ ಕೂಲಿ, ಏಪ್ರಿಲ್ 1 ರಿಂದ, 370 ರೂಪಾಯಿಗೆ ಏರಿಕೆ.**
- **'ಹಳಗನ್ನಡ ಓದು; ಪಠ್ಯಾಧಾರಿತ'; ರಾಷ್ಟ್ರೀಯ ಕಾರ್ಯಾಗಾರ, ಧಾರವಾಡದಲ್ಲಿ, ಯಶಸ್ವಿ ಸಂಪನ್ನ.**
- **ಮುದ್ದಂಡ ಕುಟುಂಬದ ಆಥಿತ್ಯ: ಕೊಡವ ಕುಟುಂಬಗಳ 25ನೇ ಹಾಕಿ ಪಂದ್ಯಾವಳಿಗೆ, ಚಾಲನೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರತಿ ಲೀಟರ್ ಶುದ್ಧ ಕುಡಿಯುವ ನೀರಿಗೆ, ಮಾರುಕಟ್ಟೆಯಲ್ಲಿ 20 ರೂಪಾಯಿ ಬೆಲೆ ಇದೆ; ಕೇಂದ್ರ ಪುರಸ್ಕೃತ, ಜಲ್ ಜೀವನ್ ಮಿಷನ್ ಯೋಜನೆ ಅಡಿ, ಪ್ರತಿ ಲೀಟರ್‌ಗೆ ಕೇವಲ 1 ಪೈಸೆಯಂತೆ, ಪ್ರತಿ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ ಎಂದು, ವಿಶ್ವ ಬ್ಯಾಂಕ್ ಕಾರ್ಯಾಚರಣೆ ಪಡೆಯ ಸದಸ್ಯ ಅಜಯ್ ಸಿಂಹ ತಿಳಿಸಿದ್ದಾರೆ. ದಾವಣಗೆರೆ ಜಿಲ್ಲೆ, ನ್ಯಾಮತಿ ತಾಲೂಕು, ದಾನಿಹಳ್ಳಿಯಲ್ಲಿ, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಸುರೇಶ ಇಟ್ನಾಳ ಅವರ ಜೊತೆ, ಜಲ್ ಜೀವನ್ ಮಿಷನ್ ಕಾಮಗಾರಿ ವೀಕ್ಷಿಸಿ, ಅವರು ಮಾತನಾಡಿದರು. ಶುದ್ಧ ಕುಡಿಯುವ ನೀರು ಪೂರೈಸಿ, ಗ್ರಾಮಗಳನ್ನು ಸ್ವಾವಲಂಬನೆಯತ್ತ ಕೊಂಡೊಯ್ಯಲು ಈ ಯೋಜನೆ ರೂಪಿತವಾಗಿದೆ ಎಂದರು.**

<><><>

**ಬೆಳಗಾವಿ ಜಿಲ್ಲೆಯಾದ್ಯಂತ ವಿಶೇಷಚೇತನರಿಗೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ, ವಿಶೇ ’ ಉದ್ಯೋಗ ಚೀಟಿ ವಿತರಣಾ ಅಭಿಯಾನವನ್ನು, ಏಪ್ರಿಲ್ 1 ರಿಂದ 15ರ ವರೆಗೆ ಆಯೋಜಿಸಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ ಶಿಂಧೆ ತಿಳಿಸಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ 10 ಸಾವಿರದ 800 ಜನ ವಿಶೇಷಚೇತನರು ಉದ್ಯೋಗ ಚೀಟಿ ಹೊಂದಿದ್ದಾರೆ. ಆ ಪೈಕಿ 2 ಸಾವಿರದ 617 ಜನ ವಿಶೇಷಚೇತನರು, 'ನರೇಗಾ'**

ಯೋಜನೆ ಅಡಿ, ಉದ್ಯೋಗ ಪಡೆದಿದ್ದಾರೆ. ಹೊಸದಾಗಿ ಉದ್ಯೋಗ ಚೀಟಿ ಪಡೆಯ ಬಯಸುವವರು, ಗ್ರಾಮ ಪಂಚಾಯ್ತಿ ಕಾರ್ಯಾಲಯ ಸಂಪರ್ಕಿಸುವಂತೆ, ಅವರು ಕೋರಿದ್ದಾರೆ.

<><><>

ಏಪ್ರಿಲ್ 1 ರಿಂದ, ಉದ್ಯೋಗ ಖಾತ್ರಿ ಕೂಲಿ ದರವನ್ನು, 349 ರೂಪಾಯಿ ಯಿಂದ 370ಕ್ಕೆ ಏರಿಸುವುದಾಗಿ, ಗ್ರಾಮೀಣಾಭಿವೃದ್ಧಿ ಇಲಾಖೆ ಎಕ್ಸ್ ಖಾತೆಯಲ್ಲಿ ಪ್ರಕಟಿಸಿದೆ.

<><><>

'ಬಗೈರ್ ಹುಕುಂ' ಭೂ ಮಂಜೂರಾತಿ, ಬಡವರ ಕೆಲಸವಾಗಿದೆ; ದಾಖಲೆಗಳ ಡಿಜಿಟಲೀಕರಣಕ್ಕೆ ಒತ್ತು ನೀಡುವಂತೆ ಸೂಚಿಸಿದ್ದಾಗಿ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ, ತಿಳಿಸಿದ್ದಾರೆ. ರಾಜ್ಯದ ಎಲ್ಲ ತಹಸೀಲ್ದಾರರೊಂದಿಗೆ, ವಿಡಿಯೋ ಸಂವಾದ ನಡೆಸಿ, ಅವರು ಪ್ರಗತಿ ಪರಿಶೀಲಿಸಿದರು.

<><><>

'ಕರ್ನಾಟಕ ಪ್ರದೇಶ ಕೃಷಿಕ ಸಮಾಜ', ರಾಜ್ಯದ ಕೃಷಿಕರಿಗೆ, ನವೀನ ಕೃಷಿ ತಂತ್ರಜ್ಞಾನ, ಉತ್ಕೃ ್ಟ ಬಿತ್ತನೆ ಬೀಜ ತಳಿಗಳು ಹಾಗೂ ಸಮಗ್ರ ಕೃಷಿ ತರಬೇತಿ ಒದಗಿಸಿ, ರೈತ ಬಾಂಧವರ ಜೀವನವನ್ನು ಸುಧಾರಿಸುತ್ತಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ, ಎಕ್ಸ್ ಮಾಧ್ಯಮದಲ್ಲಿ ಶ್ಲಾಘಿಸಿದ್ದಾರೆ.

<><><>

ಕಲ್ಲಂಗಡಿ ಬೆಳೆಗೆ ಕೆಂಪು ಹಾಗೂ ಮಸಾರಿ ಮಣ್ಣಿನ ಭೂಮಿ ಸೂಕ್ತ; ಆದರೆ ಧಾರವಾಡ ತಾಲೂಕಿನ, ಬಾಡ ಗ್ರಾಮದ ಕೃಷಿಕ, ಕಲ್ಲನಗೌಡ ಪಾಟೀಲ ಹಾಗೂ ಕುರಬಗಟ್ಟಿಯ ರೈತ, ಗುಡ್ಡಪ್ಪ ಮೈಲಾರ, ಕಪ್ಪು ಮಣ್ಣಿನಲ್ಲಿ, ಅಪರೂಪದ ಹಳದಿ ಬಣ್ಣದ ಕಲ್ಲಂಗಡಿ ಬೆಳೆದು, ಯಶಸ್ವಿಯಾಗಿದ್ದಾರೆ.

<><><>

ಹಳದಿ ಕಲ್ಲಂಗಡಿ ಬೆಳೆಯಲು, ಪ್ರತಿ ಎಕರೆಗೆ 80 ಸಾವಿರದಿಂದ 1 ಲಕ್ಷ ರೂಪಾಯಿ ಖರ್ಚಾಗುತ್ತದೆ. ತೋಟಗಾರಿಕೆ ಇಲಾಖೆ, ಹನಿ ನೀರಾವರಿಗಾಗಿ 75 ಸಾವಿರ ರೂಪಾಯಿ ಸಬ್ಸಿಡಿ ಹಾಗೂ ಹೊಸ ಹೈಬ್ರಿಡ್ ಬೀಜಗಳ ಬೆಳೆಗೆ, 8 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುತ್ತದೆ.

<><><>

65 ದಿನಗಳ ಬೆಳೆಯಾದ, ಹಳದಿ ಕಲ್ಲಂಗಡಿ ಬೆಳೆದಿರುವ ಕುರಬಗಟ್ಟಿಯ ಪ್ರಯೋಗಶೀಲ ಕೃಷಿಕ ಗುಡ್ಡಪ್ಪ ಮೈಲಾರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಕೃಷಿಕ ಗುಡ್ಡಪ್ಪ ಮೈಲಾರ ಧ್ವನಿ 50 ಸೆಕೆಂದುಗಳು

<><><>

ಹೊರ ರಾಜ್ಯಗಳ 658 ಕನ್ನಡ ಮಾಧ್ಯಮ ಶಾಲೆಗಳಲ್ಲಿ, ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿದ್ದಾರೆ ಎಂದು, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ತಿಳಿಸಿದ್ದಾರೆ. ಹೊರ ರಾಜ್ಯಗಳ ಗಡಿ ಕನ್ನಡಿಗರ ಸಮಸ್ಯೆಗಳ ಕುರಿತು, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆ ನಡೆಯಿತು. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮಾತನಾಡಿ, ರಾಜ್ಯದ ಹಾಗೂ ಹೊರ ರಾಜ್ಯದ ಗಡಿ ಸಮಸ್ಯೆಗಳ ಬಗ್ಗೆ ಪರಿಶೀಲಿಸಲು, ಒಂದೊಂದು ಇಲಾಖೆಗೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ಅವರು ಸೂಚಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಕಾಕುತ್ಸ ವರ್ಮ ಕ್ರಿಸ್ತ ಶಕೆ 450ರಲ್ಲಿ ಕೆತ್ತಿಸಿದ, ಬನವಾಸಿಯ ಹಲ್ಮಿಡಿ ಶಾಸನದಲ್ಲಿ ಕನ್ನಡ ಭಾಷೆಯ ಉಲ್ಲೇಖವಿದೆ ಎಂದು, ಶಾಸನ ತಜ್ಞೆ ಹನುಮಾಕ್ಷಿ ಗೋಗಿ ಹೇಳಿದ್ದಾರೆ. ಧಾರವಾಡದ, ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ ಆಯೋಜಿಸಿದ್ದ, 'ಹಳಗನ್ನಡ ಓದು: ಪಠ್ಯಾಧಾರಿತ' ರಾಷ್ಟ್ರ ಮಟ್ಟದ ಕಾರ್ಯಾಗಾರದಲ್ಲಿ, ಅವರು ಮಾತನಾಡಿದರು.

<><><>

ವಿಶ್ರಾಂತ ಪ್ರಾಧ್ಯಾಪಕ ಶಾಂತಿನಾಥ ದಿಬ್ಬದ ಅವರು, ಮಹಾಭಾರತದ ಕಥೆಯನ್ನು ಸರಿಯಾಗಿ ಹೇಳಬಲ್ಲವರು, ಕವಿ ಪಂಪ ಮಾತ್ರ, ಎಂದರು.

<><><>

ಪ್ರಾಚಾರ್ಯ ಶಶಿಧರ ತೋಡಕರ ಮಾತನಾಡಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿದ್ದ ಸಂದರ್ಭದಲ್ಲಿ, ಎಂ.ಎಂ. ಕಲಬುರಗಿ ಅವರು, 'ಹೊಲದ ತುಂಬಾ ಹೊಸ ಬೆಳೆ' ಎಂಬ ಯೋಜನೆ ರೂಪಿಸಿ, ಪ್ರತಿಯೊಬ್ಬ ಪ್ರಾಧ್ಯಾಪಕರಿಗೆ ಕೆಲಸವಹಿಸಿ, ವಿಶ್ವವಿದ್ಯಾಲಯದ ಆರ್ಥಿಕ ಘನತೆಯನ್ನು ಹೆಚ್ಚಿಸಿದರು ಎಂದರು.

<><><>

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಎಸ್.ಎಸ್. ಅಂಗಡಿ ಅಧ್ಯಕ್ಷತೆವಹಿಸಿದ್ದರು.

<><><>

ಕರ್ನಾಟಕದಲ್ಲಿ ದ್ವಿಭಾಷಾ ಸೂತ್ರ ಅನುಸರಿಸುವುದನ್ನು ಕೇಂದ್ರವಾಗಿ ಇಟ್ಟಿಕೊಂಡು, ಈ ನೆಲಕ್ಕೆ ಅನುಕೂಲವಾಗುವ, ಭಾಷಾ ನೀತಿಯನ್ನು ರೂಪಿಸಲು ಭಾಷಾ ತಜ್ಞರು ಹಾಗೂ ಶಿಕ್ಷಣ ತಜ್ಞರು ಚಿಂತಿಸಬೇಕು ಎಂದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊಫೆಸರ್ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ. 1968 ರಿಂದ ತ್ರಿಭಾಷಾ ಸೂತ್ರ ಅನುಸರಿಸಿರುವ, ಕರ್ನಾಟಕಕ್ಕೆ ಆಗಿರುವ ಲಾಭದ ಬಗ್ಗೆ, ಸಂಶೋಧನೆ ನಡೆಸುವಂತೆ ಅವರು ಒತ್ತಾಯಿಸಿದ್ದಾರೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ, ಬಿಳಿಮಲೆ ಅವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

<><><>

ಪ್ರೊ. ಪುರುಷೋತ್ತಮ ಬಿಳಿಮಲೆ ಧ್ವನಿ 60 ಸೆಕೆಂದುಗಳು

<><><>

ಬೆಳಗಾವಿ ಜಿಲ್ಲೆಯಾದ್ಯಂತ, ಸೈಬರ್ ವಂಚಕರ ಖಾತೆಗಳ ಪರಿಶೀಲನೆ ನಡೆದಿದ್ದು, ಅಂಥ ಪ್ರಕರಣಗಳು ಕಂಡುಬಂದಲ್ಲಿ, ನೇರವಾಗಿ ಪೊಲೀಸ್ ಠಾಣೆಗೆ ತೆರಳಿ, ದೂರು ಸಲ್ಲಿಸುವಂತೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೇದ

ಮನವಿ ಮಾಡಿದ್ದಾರೆ. ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ಬೀಡಿ ಗ್ರಾಮದ ವೃದ್ಧ ದಂಪತಿಗಳು, ಸೈಬರ್ ವಂಚಕರ ಸತತ ಕಿರುಕುಳಕ್ಕೆ ಮನನೊಂದು, ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ, 50 ಲಕ್ಷ ರೂಪಾಯಿ ಕಳೆದುಕೊಂಡು, ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆ, ಅವರು ಸಾರ್ವಜನಿಕರನ್ನು ಎಚ್ಚರಿಸಿದ್ದಾರೆ.

<><><>

ಕೊಡವರ ಸಂಸ್ಕೃತಿ, ಆಚಾರಗಳ ಬೆಸುಗೆಗೆ, ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಕಾರಣವಾಗಿದೆ ಎಂದು, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್.ಪೊನ್ನಣ್ಣ ಹೇಳಿದ್ದಾರೆ. ಕೊಡಗು ಜಿಲ್ಲೆ, ಮಡಿಕೇರಿಯ ಫೀಲ್ಡ್ ಮಾ ರ್ಶಲ್ ಕಾರ್ಯಪ್ಪ ಕಾಲೇಜಿನ ಆವರಣದಲ್ಲಿ, ಮುದ್ದಂಡ ಕುಟುಂಬದ ಆಥಿತ್ಯದಲ್ಲಿ, ಕೊಡವ ಕುಟುಂಬಗಳ 25ನೇ ಹಾಕಿ ಪಂದ್ಯಾವಳಿಗೆ, ಚಾಲನೆ ನೀಡಿ ಅವರು ಮಾತನಾಡಿದರು. ರಾಷ್ಟ್ರೀಯ ಕ್ರೀಡೆ, ಹಾಕಿಯನ್ನು ಪ್ರೋತ್ಸಾಹಿಸಲು, ರಾಜ್ಯ ಸರ್ಕಾರದಿಂದ ಈ ಬಾರಿ 1 ಕೋಟಿ 50 ಲಕ್ಷ ರೂಪಾಯಿ ಅನುದಾನ, ಈ ಪಂದ್ಯಾವಳಿಗೆ ನಿರೀಕ್ಷಿಸಲಾಗಿದೆ, ಎಂದರು. ಸಂಸದ ಯದುವೀರ್ ಒಡೆಯರ್, ಶಾಸಕರಾದ ಮಂಥರ್ ಗೌಡ, ಸುಜಾ ಕುಶಾಲಪ್ಪ ಸೇರಿದಂತೆ, ಸಾವಿರಾರು ಹಾಕಿ ಪ್ರೇಮಿಗಳು ಪಾಲ್ಗೊಂಡಿದ್ದರು.

<><><>

ಬೆಳಗಾವಿ ಜಿಲ್ಲೆ, ಪರಸಗಡ ತಾಲೂಕು, ಶಿರಸಂಗಿಯಲ್ಲಿ, ವಿಶ್ವಕರ್ಮ ಕುಲದೇವತೆ ಶ್ರೀ ಕಾಳಿಕಾದೇವಿ ದೇಗುಲದಲ್ಲಿ, ಸಾಂಪ್ರದಾಯಿಕ ಯುಗಾದಿ ಜಾತ್ರಾ ಮಹೋತ್ಸವ, ಇಂದು ಶ್ರದ್ಧಾ, ಭಕ್ತಿಯ ನಡುವೆ ಜರುಗಲಿದೆ. ಅಯೋಧ್ಯೆಯ ಶ್ರೀ ಬಾಲ ರಾಮನ ಮೂರ್ತಿಯ ಶಿಲ್ಪಿ, ಮೈಸೂರಿನ ಅರುಣ ಯೋಗಿರಾಜ ಅವರಿಗೆ, ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯಿಂದ, ವಿಶ್ವಕರ್ಮ ಶಿಲ್ಪಕಲಾ ರತ್ನ ಭೂಷಣ ಪ್ರಶಸ್ತಿಯನ್ನು, ಗಣ್ಯರು ಪ್ರದಾನ ಮಾಡಿ, ಗೌರವಿಸಲಿದ್ದಾರೆ.

<><><>

ಸಮಾಜ ಸೇವಕರಾದ, ಎಂ.ಎನ್.ರಾಜೇಂದ್ರ ಕುಮಾರ್, ರೋಹನ್ ಮೊಂತೆರೋ ಮತ್ತು ಕನ್ಯಾನ ಸದಾಶಿವ ಶೆಟ್ಟಿ ಅವರಿಗೆ, ಮಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಕಟಿಸಲಾಗಿದೆ. ಉಪ ಕುಲಪತಿ ಪಿ.ಎಲ್.ಧರ್ಮ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಕುಲಾಧಿಪತಿ ಥಾವರಚಂದ್ ಗೆಹ್ಲೋಟ್ ಹಾಗೂ ಸಮ ಕುಲಾಧಿಪತಿ ಎಂ.ಸಿ. ಸುಧಾಕರ್ ಅವರು ಪಾಲ್ಗೊಂಡು, 54 ಚಿನ್ನದ ಪದಕ ಹಾಗೂ ಪದವಿಗಳನ್ನು ಇಂದು ಪ್ರದಾನ ಮಾಡಲಿದ್ದಾರೆ, ಎಂದರು.

<><><>

ಆಕಾಶವಾಣಿಯ ಬಹುಶ್ರುತ ಕಾರ್ಯಕ್ರಮ, 'ಮನ್ ಕಿ ಬಾತ್' ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ 30, ಭಾನುವಾರದಂದು, ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಇದು ಮನದ ಮಾತಿನ 120ನೇ ಸಂಚಿಕೆಯಾಗಿದೆ.

<><><>

ಭಾರತ ರತ್ನ ಬಿ.ಆರ್. ಅಂಬೇಡ್ಕರ್ ಅವರ ಜಯಂತಿ, ಎಲ್ಲ ಕೈಗಾರಿಕಾ ಸಂಸ್ಥೆಗಳು ಹಾಗೂ ಕೇಂದ್ರದ ಎಲ್ಲ ಕಚೇರಿಗಳಿಗೂ, ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ಪ್ರಧಾನಿಯವರನ್ನು ಅಭಿನಂದಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಜಲ್ ಜೀವನ್ ಮಿಷನ್; ಪ್ರತಿ ಲೀಟರ್‌ಗೆ 1 ಪೈಸೆಯಂತೆ, ಪ್ರತಿ ಮನೆಗೆ ಶುದ್ಧ ಕುಡಿಯುವ ನೀರು ಪೂರೈಕೆ – ಅಜಯ್ ಸಿಂಹ.
- ಮಹಾತ್ಮ ಗಾಂಧಿ ನರೇಗಾ ಯೋಜನೆ ಕೂಲಿ, ಏಪ್ರಿಲ್ 1 ರಿಂದ, 370 ರೂಪಾಯಿಗೆ ಏರಿಕೆ.
- 'ಹಳಗನ್ನಡ ಓದು; ಪಠ್ಯಾಧಾರಿತ'; ರಾಷ್ಟ್ರೀಯ ಕಾರ್ಯಾಗಾರ, ಧಾರವಾಡದಲ್ಲಿ, ಯಶಸ್ವಿ ಸಂಪನ್ನ.
- ಮುದ್ದಂಡ ಕುಟುಂಬದ ಆಥಿತ್ಯ; ಕೊಡವ ಕುಟುಂಬಗಳ 25ನೇ ಹಾಕಿ ಪಂದ್ಯಾವಳಿಗೆ, ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>